ಚಲಿಸುವ ಸಂದಣಿಯ ನಡುವಿನಿಂದ ನುಗ್ಗಿ ಬಂದಿತ್ತು. ಅದರ ಹಿಂದೆಯೇ ಕೈಯಲ್ಲಿ ಪರ್ಸು ಹಿಡಿದುಕೊಂಡ ಧಡಿಮನೂ, ಅವನ ಹಿಂದೆ ಸಿಳ್ಳೇಕ್ಯಾತನಂತಿರುವ ಉಮೇಶಿಯೂ ಧರೆಗುರುಳಿತ್ತಿರುವ ಉಲ್ಕೆಗಳ ವೇಗದಲ್ಲಿ ಓಡುತ್ತಾ ಬಂದರು. ಜನರೆಲ್ಲ ಇವರನ್ನು ಯಾವುದೋ ಧಾರಾವಾಹಿಯೊಳಗಿನಿಂದ ಓಡುತ್ತಾ ಆಚೆ ಬಂದ ಪಾತ್ರಗಳೇನೋ ಎಂಬಂತೆ ಕಣ್ಕಣ್ಣು ಬಿಟ್ಟು ನೋಡುತ್ತಿರುವಾಗ ಒಬ್ಬ ಜಬ್ಬರ್ ಮಾತ್ರ ಥಟ್ಟನೆ ಮುನ್ನುಗ್ಗಿ ಧಡಿಮನ ಕಾಲಿಗೆ ತನ್ನ ಕಾಲು ಅಡ್ಡ ಕೊಟ್ಟದ್ದೂ, ಆತ ಉರುಳಿ ಬಿದ್ದಿದ್ದೂ ನಡೆದುಹೋಯಿತು. ಅಷ್ಟೇ! ಬಿರುಗಾಳಿಯಂತೆ ನುಗ್ಗಿ ಬಂದ ಉಮೇಶಿ ಎಲ್ಲರ ನಿರೀಕ್ಷೆಯನ್ನೂ ಮೀರಿ ಆ ಧಡಿಮನನ್ನು ತಡವಿಕೊಂಡ. ಅವರಿಬ್ಬರ ಮಾರಾಮಾರಿಯಿಂದ ಚಿಮ್ಮಿ ಆಚೆ ಬಿದ್ದ ಪರ್ಸನ್ನು ಎತ್ತಿಕೊಂಡ ಜಬ್ಬರ್ ಕುತೂಹಲಕ್ಕೆಂಬಂತೆ ಅದರ ಬಾಯಿ ಅಗಲಿಸಿ ನೋಡಿದರೆ ಅದರೊಳಗೆ ಎಪ್ಪತ್ತು ರೂಪಾಯಿಯಿತ್ತು. ಕೇವಲ ಎಪ್ಪತ್ತು ರೂಪಾಯಿ! ಬರೀ ಇಷ್ಟಕ್ಕಾಗಿ ಮನುಷ್ಯನೊಬ್ಬ ಈ ಮಟ್ಟಿಗೆ ಜೀವ ಕೈಯಲ್ಲಿ ಹಿಡಿದು ಓಡಿ ಬರುತ್ತಾನಾ? ತನ್ನ ನಾಲ್ಕು ಪಟ್ಟಿರುವ ದೈತ್ಯನೊಬ್ಬನನ್ನು ಈ ಮಟ್ಟಿಗೆ ತಡವಿಕೊಳ್ಳುತ್ತಾನಾ? ಮಾರಾಮಾರಿ ಮುಗಿದು, ಆ ಧಡಿಯ ಮೆಜಸ್ಟಿಕ್ಕಿನ ಸಕಲ ಪ್ರಜಾತಿಗಳೂ ಇರುವ ಸಂದಣಿಯೊಳಗೆಲ್ಲೋ ಮರೆಯಾಗಿ, ಉಮೇಶಿ ಏದುಸಿರು ಬಿಡುತ್ತಾ ಬೆಂಚೊಂದರ ಮೇಲೆ ಕುಳಿತ ಬಳಿಕ ಆ ಪ್ರಶ್ನೆಯನ್ನು ಖುದ್ದು ಅವನಿಗೇ ಕೇಳಿದ ಜಬ್ಬರ್. ಮತ್ತೊಮ್ಮೆ ಆ ಮೊತ್ತವನ್ನು ನಡುಗುವ ಕೈಯಲ್ಲಿ ಎಣಿಸಿ ಖಾತ್ರಿ ಪಡಿಸಿಕೊಂಡ ಉಮೇಶಿ 'ಮುಂದೆ ಕೆಲಸ ಸಿಗೋ ತಂಕ ಇದೇ ನನಗೆ ಊಟ' ಎಂದುಬಿಟ್ಟ.

ಅದಾಗಿ ಮಾರನೆಯ ವಾರಕ್ಕೆಲ್ಲಾ ಜಬ್ಬರ್ ಹಾಗೂ ಉಮೇಶಿ ತೆಕ್ಕೋಜಿ ಪ್ಯಾರಡೈಸ್ ನಲ್ಲಿ ದೋಸೆ ಹುಯ್ಯುತ್ತಿದ್ದರು.

* * *

ಶಹರ ಹಾಗೂ ಊರೆನ್ನುವ ಬದುಕಿನ ಎರಡು ಅಂಚುಗಳ ನಡುವೆ ಇಷ್ಟು ಸ್ವತಂತ್ರವಾಗಿ ಓಡಾಡುವ ಬಸ್ಸಿನ ಬಗ್ಗೆ ಖುದ್ದು ಜಬ್ಬರನಿಗೂ ಅಚ್ಚರಿಯಿತ್ತು. ಎರಡು, ಮೂರು ದಿನ ಊರಲ್ಲಿರುವುದಕ್ಕೆ ಎಷ್ಟೆಷ್ಟೋ ತಿಂಗಳು ಕಾಯುವ, ಅತ್ತ ಪೇಟೆಯವರೂ ಆಗದೆ, ಇತ್ತ ಊರಿಗೂ ಸೇರದೇ ಅತೃಪ್ತ ಆತ್ಮಗಳಂತೆ ಅಲೆದಾಡುವವರ ನಡುವೆ ಎರಡಕ್ಕೂ ಸ್ವಂತವಾಗದೇ ಉಳಿದ ಬಸ್ಸಿನ ಮೇಲೊಂದು ಮಮಕಾರ ತಾನಾಗೇ ಹುಟ್ಟಿಕೊಂಡಿತ್ತು. ಹಬ್ಬ, ರಜೆಗಳ ಕಟ್ಟಕಡೆಯ ದಿನದ ರಾತ್ರಿಯಂದು ಚಿಕ್ಕ ಚಡ್ಡಿ, ಲೂಸು ಟೀಶರ್ಟು ಹಾಕಿಕೊಂಡು ಬಸ್ಸಿನ ಎರಡು ಮೆಟ್ಟಿಲು ಹತ್ತಿ ನಿಂತು 'ಜಯನಗರ ಪಂಪ್ ಹೌಸಲ್ಲಿ ಸ್ಟಾಪ್ ಕೊಡ್ತೀರಾ?', 'ಬೆಳಿಗ್ಗೆ ಆರರೊಳಗೆ ರೀಚ್ ಆಗ್ತೀರಾ?' ಎಂದೆಲ್ಲ ಕೇಳುವ ಪ್ರಯಾಣಿಕರು ಬೆದರಿದ ಗುಬ್ಬಿಗಳಂತೆ ಅವನಿಗೆ ಕಾಣುತ್ತಿದ್ದರು. ನಗರಿ ಅವರ ಬದುಕಿನ ಒಂದೊಂದು ನಿಮಿಷವನ್ನೂ ಬಂಧಿಸಿಟ್ಟಿದೆ ಅನಿಸಿದಾಗೆಲ್ಲ ಅವನಿಗೆ ವಿಷಾದವಾಗುತ್ತಿತ್ತು. ಬೆಳಗಿನ ಜಾವ ಮೂರಕ್ಕೇ ಎದ್ದು ಬಂದು, ಕ್ಯಾಬಿನ್ನಿನ ಬಾಗಿಲು ತಟ್ಟಿ 'ಮೆಜಸ್ಟಿಕ್ ಎಷ್ಟೊತ್ತಿಗೆ ಹೋಗ್ತೀರಾ?', 'ನವರಂಗ್ ಹಿಂದೆ ಹೋಯ್ತಾ?' ಎಂದು ನಿದ್ರೆಗಣ್ಣಿನಲ್ಲೇ ಕೇಳುವವರಿಗೆ, 'ಹೆದರಬೇಡಿ. ಇನ್ನೂ ದೂರ ಇದೆ. ಆರಾಮಾಗಿ ಮಲಗಿ' ಎಂದವನು ಅಭಯ ಹೇಳುತ್ತಿದ್ದ. ಈಗಷ್ಟೇ ಡಿಗ್ರಿ ಮುಗಿಸಿ ಕೆಲಸ ಹುಡುಕಿ ಹೊರಟ ಮೀಸೆ ಚಿಗುರಿದ ಹುಡುಗರಾದರೂ ಪ್ರತಿ ಬಾರಿ ಬಸ್ಸು ನಿಂತಾಗಲೂ 'ಇದು ಎಂಟನೇ ಮೈಲಿಯಾ?', 'ಇದು ಮೆಜಸ್ಟಿಕ್ಕಾ?' ಎಂದೆಲ್ಲ ಕೇಳುತ್ತಾ ಬಸ್ಸಿನ ಗಾಜಿನಾಚೆಗಿನ ಬೆಂಗಳೂರನ್ನು ಭಯಾಶ್ಚರ್ಯಗಳಿಂದ ನೋಡುತ್ತಿದ್ದರು. ಆ ಕ್ಷಣದಲ್ಲಿ ಅವರ ಕಣ್ಣಲ್ಲಿ ವಿಚಿತ್ರವಾಗಿ ಹೊಳೆಯುತ್ತಿರುವ ಎಂಟನೇ ಮೈಲಿ, ಮುಂದೆ ಅವರನ್ನು ಹೇಗೆ ಸ್ವಾಗತಿಸುತ್ತದೆ, ಹೇಗೆಲ್ಲಾ ಪೊರೆಯುತ್ತದೆ ಎಂಬುದನ್ನು ಕಲ್ಪಿಸಿಕೊಳ್ಳುತ್ತಲೇ ಜಬ್ಬರ್ ಆಕ್ಸಿಲೇಟರ್ ತುಳಿಯುತ್ತಿದ್ದ.

ಇನ್ನು ನಗರದಲ್ಲೆಲ್ಲೋ ಇರುವ ಮಗ, ಮಗಳನ್ನು ನೋಡಲು ಮೊದಲ ಬಾರಿ ಶಹರಿಗೆ ಹೊರಟ ಹಿರಿಯ ಜೀವಗಳಾದರೂ 'ಅಂ, ಏನು? ನವರಂಗಾ? ಅಲ್ಲಿ ಬಸ್ ಸ್ಟ್ಯಾಂಡ್ ಇದ್ಯಾ? ಅಯ್ಯೋ ನಂಗೆ ಗೊತ್ತಾಗ್ತಿಲ್ಲ ಇರು ಡ್ರೈವರಿಗೇ ಕೊಡ್ತೀನಿ' ಎನ್ನುತ್ತಾ ಮಹಾನಗರಿಯೆನ್ನುವ ತೊಟ್ಟಿಲಿನೊಳಕ್ಕೆ ತಮ್ಮನ್ನು ಹುಶಾರಾಗಿ ಇಳಿಸುವ ಜವಾಬ್ದಾರಿಯನ್ನು ಅವನ ಹೆಗಲಿಗೇ ವಹಿಸಿಬಿಡುತ್ತಿದ್ದರು. ಅವರು ತಮ್ಮ ಕಾದು ನಿಂತ ಮಗ ಅಥವಾ ಮಗಳನ್ನು ಸೇರಿ, ನೆಮ್ಮದಿಯ ನಿಟ್ಟುಸಿರಿಟ್ಟು ನಡೆಯುತ್ತಾ ಹೋದುದನ್ನು ಕಣ್ತುಂಬಿಕೊಂಡ ಬಳಿಕ